ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 666
ಸದಸ್ಯರ ಹೆಸರು : ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 17.09.2021
ಉತ್ತರಿಸುವವರು : ಮಾನ್ಯ ರೇಷ್ಮೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು

	ಪ್ರಶ್ನೆಗಳು	ಉತ್ತರಗಳು
ಅ	ಮೈಸೂರಿನ ಶುದ್ಧ ರೇಷ್ಮೆ ಬಿತ್ತನೆ ಗೂಡನ್ನು ಉತ್ಪಾದಿಸಲು ಮೀಸಲಿರಿಸುವ ಪ್ರದೇಶಗಳು ಯಾವುವು: (ವಿವರ ನೀಡುವುದು)	ಜವಳಿ ಮಂತ್ರಾಲಯದ (ಕೇಂದ್ರ ರೇಷ್ಮೆ ಮಂಡಳಿಯ) ಅಧಿಸೂಚನೆ ದಿನಾಂಕ: 22.09.2010 ರಲ್ಲಿ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕು, ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕು ಮತ್ತು ತುಮಕೂರು ತಾಲ್ಲೂಕಿನ ಹೆಬ್ಬೂರು ಹೋಬಳಿಗಳನ್ನು ಒಳಗೊಂಡ ಪ್ರದೇಶವನ್ನು (510 ಹಳ್ಳಿಗಳು) ಮೈಸೂರು ಬಿತ್ತನೆ ಪ್ರದೇಶವೆಂದು ಅಧಿಸೂಚಿಸಲಾಗಿದೆ.
ಆ	ಬಿತ್ತನೆ ಪ್ರದೇಶದಲ್ಲಿ ಇತ್ತೀಚೆಗೆ ಗಂಟು ರೋಗದ ಬಾಧೆಯಿಂದ ಮೈಸೂರು ಶುದ್ಧ ತಳಿ ಬಿತ್ತನೆ ಗೂಡಿನ ಉತ್ಪಾದನೆಗೆ ತೀವ್ರವಾದ ತೊಂದರೆ ಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಕೈಗೊಂಡ ಕ್ರಮಗಳೇನು:	ಮೈಸೂರು ಬಿತ್ತನೆ ಪ್ರದೇಶದಲ್ಲಿ ಇತ್ತೀಚಿಗೆ ಗಂಟು ರೋಗದ ರೋಗಾಣುಗಳು ಕಂಡು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಮೂಲ ತಳಿಯಲ್ಲಿ ಕಂಡ ಕೂಡಲೇ ಸಿಲ್ಕ್ ವರ್ಮ್ ಸೀಡ್ ಟೆಕ್ನಾಲಜಿ (ಕೇಂದ್ರ ರೇಷ್ಮೆ ಮಂಡಳಿ) ವಿಜ್ಞಾನಿಗಳು, ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನ ಮತ್ತು ಅಭಿವೃದ್ಧಿ ಸಂಸ್ಥೆಯ ವಿಜ್ಞಾನಿಗಳು ಸೇರಿ, JSDMS (Join Silkworm Disease Monitory Survey) ತಂಡದವರು ದಿನಾಂಕ 02-07-2021 ಹಾಗೂ 03-07-2021 ರಂದು ಬಿತ್ತನೆ ಪ್ರದೇಶದಲ್ಲಿ ರೋಗ ಪತ್ತೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು, ಒಟ್ಟು 551 ಮಾದರಿಗಳನ್ನು ಪರೀಕ್ಷಿಸಲಾಗಿ ಯಾವುದೇ ತಂಡಗಳಲ್ಲಿ ಗಂಟು ರೋಗ ಕಂಡು ಬಂದಿರುವುದಿಲ್ಲ. ಆದಾಗ್ಯೂ, ಈ ಕೆಳಕಂಡ ನಿಯಂತ್ರಣ ಕ್ರಮಗಳನ್ನು ಅನುಸರಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. 1. ಪಿ4, ಪಿ3, ಪಿ2 ಮತ್ತು ಪಿ1 ಬಿತ್ತನೆ ಕೋಠಿಗಳಲ್ಲಿ ಚಿಟ್ಟೆ ಹಂತ ದಲ್ಲಿ ಕಡ್ಡಾಯ

		ಪರೀಕ್ಷೆ ಮಾಡಲಾಗುತ್ತಿದ್ದು ಸಂಶಯಾಸ್ಪದ ಲಾಟ್‌ಗಳನ್ನು ಸುಟ್ಟು ನಾಶಪಡಿಸಲಾಗುತ್ತಿದೆ. 2. ತಾಂತ್ರಿಕ ಸೇವಾ ಕೇಂದ್ರಗಳಲ್ಲಿ ಮೊಟ್ಟೆ ವಿತರಣೆಗೆ ಮುನ್ನ ರೇಷ್ಮೆ ಬೆಳೆಗಾರರು ಸೋಂಕು ನಿವಾರಣೆ ಮಾಡಿಕೊಂಡಿರುವುದನ್ನು ಖಚಿತಪಡಿಸಿಕೊಂಡು ಮೊಟ್ಟೆ ನೀಡಲಾಗುತ್ತಿದೆ. 3. ಬಿತ್ತನೆ ಗೂಡು ಮಾರುಕಟ್ಟೆಗಳಲ್ಲಿ ಬಿತ್ತನೆಗೆ ಖರೀದಿಸುವ ಗೂಡುಗಳಲ್ಲಿ ಗಂಟು ರೋಗ ರಹಿತವನ್ನು ಕೋಶ ಪರೀಕ್ಷೆ ಮಾಡಿ ಗೂಡು ಖರೀದಿಸಲು ವ್ಯವಸ್ಥೆ ಮಾಡಲಾಗಿದೆ. 4. ದಿನಾಂಕ 21-08-2021 ರಂದು ಮತ್ತೆ JSDMS (Joint Silkworm Disease Monitory Survey) ರವರು ಸಮೀಕ್ಷೆ ನಡೆಸಿದ್ದು, 369 ಮಾದರಿಗಳನ್ನು ಪರೀಕ್ಷಿಸಿರುತ್ತಾರೆ. 4 ಸ್ಯಾಂಪಲ್‌ಗಳಲ್ಲಿ ಸಂಶಯಾಸ್ಪದ ಗಂಟು ರೋಗಾಣುಗಳ ಪ್ರಭೇದಗಳು ಕಂಡು ಬಂದಿದ್ದು, ಸಂಬಂಧಪಟ್ಟಂತಹ ತಳಿಯ ಮೂಲಗಳನ್ನು ಪತ್ತೆ ಮಾಡಿ ನಿಯಮಾನುಸಾರ ನಾಶಪಡಿಸಲಾಗಿದೆ. 5. ದಿನಾಂಕ 08-09-2021 ರಂದು ಸನ್ಮಾನ್ಯ ರೇಷ್ಮೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು ನಡೆಸಿದ ಪರಿಶೀಲನಾ ಸಭೆಯ ನಡವಳಿಗಳಂತೆ ಸರ್ವೇ ಹಾಗೂ ಸ್ವಾಸ್ಥ್ಯ ನಿರ್ಣಯ ಕೈಗೊಳ್ಳಲು, ಸಿಲ್ಕ್ ವರ್ಮ್ ಸೀಡ್ ಟೆಕ್ನಾಲಜಿ ಲ್ಯಾಬೋರೇಟರಿ (SSTL), ಕೊಡತಿ, ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ವಿಜ್ಞಾನಿಗಳು ಹಾಗೂ ಇಲಾಖೆಯ ಹಿರಿಯ ಅಧಿಕಾರಿಗಳನ್ನು ಒಳಗೊಂಡ ತಂಡಗಳನ್ನು ರಚಿಸಲಾಗಿದೆ. ಸದರಿ ತಂಡಗಳು ಕ್ಷೇತ್ರ ಮಟ್ಟಕ್ಕೆ ಭೇಟಿ ನೀಡಿ ಚಾಕಿ ಸಾಕಾಣಿಕಾ ಕೇಂದ್ರಗಳು, ಖಾಸಗಿ ಮೊಟ್ಟೆ ತಯಾರಕರು, ಕೃಷಿ ಕ್ಷೇತ್ರಗಳು, ಸರ್ಕಾರಿ ಬಿತ್ತನೆ ಕೋಠಿಗಳು, ಮಾರುಕಟ್ಟೆಗಳು ಮತ್ತು ರೇಷ್ಮೆ ಬೆಳೆಗಾರರ ಬೆಳೆಗಳ ತಪಾಸಣೆಯನ್ನು ನಿಯಾಮಾನುಸಾರ ಕೈಗೊಂಡು ಗಂಟು ರೋಗ ಕಂಡುಬಂದಲ್ಲಿ ಕೂಡಲೇ ಪ್ರಥಮ ಮಾಹಿತಿ ವರದಿ ಸಿದ್ಧಪಡಿಸಲು ಸೂಚಿಸಿದೆ. ಬಿತ್ತನೆ ಪ್ರದೇಶದಲ್ಲಿ ಗಂಟು ರೋಗ ನಿಯಂತ್ರಣದಲ್ಲಿದ್ದು, ಬಿತ್ತನೆ ಗೂಡುಗಳಿಗೆ ಯಾವುದೇ ಅಡಚಣೆಯಾಗಿರುವುದಿಲ್ಲ.

ಇ	ಬಿತ್ತನೆ ಗೂಡಿಗಾಗಿ C.S.R.2 ಗೂಡನ್ನು ಬೆಳೆಯಲು ಮೀಸಲಿರಿಸಿರುವ ಪ್ರದೇಶಗಳ ವಿವರ ಮತ್ತು ಕಾಡುತ್ತಿರುವ ರೋಗ ಬಾಧೆ ಯಾವುವು; ರೋಗ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು?	ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕು, ಬೆಳಗಾಂ ಜಿಲ್ಲೆ, ಹಾಸನ ಜಿಲ್ಲೆ, ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕು, ಕೊಡಗು ಜಿಲ್ಲೆ, ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕು, ತುಮಕೂರು ಜಿಲ್ಲೆಯ ತುರುವೇಕೆರೆ ಹಾಗೂ ಚಿಕ್ಕನಾಯಕನಹಳ್ಳಿ ಮತ್ತು ತಿಪಟೂರು ತಾಲ್ಲೂಕು ಸೇರಿ ಒಟ್ಟು 7 ಜಿಲ್ಲೆಗಳನ್ನು ದ್ವಿತಳಿ ಬಿತ್ತನೆ ಪ್ರದೇಶವೆಂದು ಪರಿಗಣಿಸಲಾಗಿರುತ್ತದೆ. ರೇಷ್ಮೆ ಹುಳುಗಳಿಗೆ ಕಾಡುವ ರೋಗದ ನಿಯಂತ್ರಣಕ್ಕಾಗಿ ರೇಷ್ಮೆ ದ್ವಿತಳಿ ಪ್ರದೇಶಗಳಲ್ಲಿ ಸೋಂಕು ನಿವಾರಣೆ ಹಾಗೂ ಸೋಂಕು ನಿಯಂತ್ರಣಕ್ಕಾಗಿ ಸಾಮಾನ್ಯ ಸೋಂಕು ನಿವಾರಕಗಳು ಹಾಗೂ ಹಾಸಿಗೆ ಸೋಂಕು ನಿವಾರಕಗಳನ್ನು ರೇಷ್ಮೆ ಬೆಳೆಗಾರರಿಗೆ ಉಚಿತವಾಗಿ ವಿತರಿಸಿ, ಸೋಂಕು ನಿವಾರಣೆ ಮಾಡಿಸಲಾಗುತ್ತಿದೆ ಹಾಗೂ ರೋಗ ನಿಯಂತ್ರಣದಲ್ಲಿದೆ.

ಸಂಖ್ಯೆ: ರೇಷ್ಮೆ 163 ರೇಕೃವಿ 2021

(ಡಾ. ನಾರಾಯಣ ಗೌಡ)
ರೇಷ್ಮೆ ಹಾಗೂ ಯುವಸಬಲೀಕರಣ
ಮತ್ತು ಕ್ರೀಡಾ ಸಚಿವರು